<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊಸಕೋಟೆ.</u>

**ಓ.ಎಸ್. ಸಂಖ್ಯೆ.2918/2022** ಡಿ.ಡಬ್ಲೂ .1

ದಿನಾಂಕಃ 28-01-2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ</u>

1. 2001-02 ರಲ್ಲಿ ಕಂದಾಯ ಅಧಿಕಾರಿಗಳು ಸ್ಥಳ ತನಿಖೆಗಾಗಿ ದಾವಾ ಆಸ್ತಿ ಬಳಿ ಅಸಲು ದಾವಾ ನಂ.110/1997 ರ ದಾವೆಯ ಬಗ್ಗೆ ಬಂದಿದ್ದರು. ಆ ಬಗ್ಗೆ ಸದರಿ ದಾವೆಯಲ್ಲಿ ಆದೇಶ ಆಗಿರುತ್ತದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಕಂದಾಯ ಅಧಿಕಾರಿಗಳು ಸ್ಥಳಕ್ಕೆ ಬಂದಾಗ ಸದರಿ ದಾವೆಯ ಬಗ್ಗೆ ನನಗೆ ತಿಳಿಸಿದಾಗ ನನಗೆ ಗೊತ್ತಾಗಿರುತ್ತದೆ. ಅಸಲು ದಾವಾ ಸಂ.110/1997 ರ ದಾವೆಯನ್ನು ಹಕ್ಕು ಘೋಷಣೆಗಾಗಿ ಸಲ್ಲಿಸಿದ್ದು, ಸದರಿ ದಾವೆಗೂ ಸ್ಥಳ ತನಿಖೆಗೂ ಯಾವುದೇ ಸಂಬಂಧ ಇರಲಿಲ್ಲ ಎಂದರೆ ಸಾಕ್ಷಿ ದಾವಾ ಆಸ್ತಿಯಲ್ಲಿ ನಾನು ಸ್ವಾಧೀನದಲ್ಲಿ ಇದ್ದು, ಕಂದಾಯ ಅಧಿಕಾರಿಗಳು ಯಾರದು ಜಮೀನು ಎಂದು ಕೇಳಿದಾಗ ನನ್ನದೆ ಎಂದು ಹೇಳಿರುತ್ತೇನೆ ಎಂದು ನುಡಿದಿರುತ್ತಾರೆ. ಸರ್ವೇ ನಂ.72/1 ರ ಆಸ್ತಿಗೆ ಸಂಬಂಧಿಸಿದಂತೆ ನನ್ನ ಹೆಸರಿನಲ್ಲಿ ದಾಖಲೆ ಇದೆಯಾ ಎಂದರೆ ಇಲ್ಲ, ನನ್ನ ಅಜ್ಜಿ ದೊಡ್ಡನಂಜಮ್ಮ ಉರುಫ್ ನಂಜಮ್ಮ ಹೆಸರು ಇದೆ ಎಂದು ನುಡಿಯುತ್ತಾರೆ. 2001-02 ರ ಸಾಲಿನಲ್ಲಿ ದೊಡ್ಡನಂಜಮ್ಮ ಉರುಫ್ ನಂಜಮ್ಮ ರವರ ಹೆಸರಿನಲ್ಲಿ 2 ಎಕರೆ 9 ಗುಂಟೆಗೆ ಪಹಣಿ ಇದೆ. ಸದರಿ ದಾಖಲೆಯನ್ನು ಹಾಜರು ಮಾಡಿದ್ದೇನೆ. ನಾನು ಪಹಣಿಯನ್ನು ಹೊರತುಪಡಿಸಿ ವಿಭಾಗ ಪತ್ರ ಮತ್ತು ದಾನ ಪತ್ರ ಹಾಜರು ಮಾಡಿದ್ದೇನೆ. ದೊಡ್ಡನಂಜಮ್ಮ ಉರುಫ್ ನಂಜಮ್ಮ ರವರು 2 ಎಕರೆ 9 ಗುಂಟೆಗೆ ಕಂದಾಯ ಪಾವತಿಸಿದ್ದಾರೆ. ಅವರು

ಯಾವ ಸಾಲಿನಲ್ಲಿ ಕಂದಾಯ ಪಾವತಿಸಿದ್ದಾರೆ ಎಂದು ಗೊತ್ತಿಲ್ಲ. ಸದರಿ ರಶೀದಿಗಳನ್ನು ಹಾಜರು ಮಾಡಿದ್ದೇನೆ. ದಾವಾ ಆಸ್ತಿ ದೊಡ್ಡನಂಜಮ್ಮ ಉರುಫ್ ನಂಜಮ್ಮ ರವರ ಹೆಸರಿನಲ್ಲಿ ಯಾವುದೇ ಕಂದಾಯ ದಾಖಲೆಗಳು ಇಲ್ಲ ಎಂದರೆ ಸುಳ್ಳು.

2. ನಮಗೂ ಹಾಗೂ ದಾವಾ ಆಸ್ತಿಗೂ ಸಂಬಂಧ ಇಲ್ಲದೆ ಇದ್ದ ಕಾರಣ ಅಸಲು ದಾವಾ ಸಂ.110/1997 ರಲ್ಲಿ ನಮ್ಮನ್ನು ಪಕ್ಷಗಾರನ್ನಾಗಿ ಮಾಡಿಲ್ಲ ಎಂದರೆ ಸುಳ್ಳು. ಸದರಿ ದಾವೆಯಲ್ಲಿ ನನ್ನನ್ನು ಪಕ್ಷಗಾರನ್ನಾಗಿ ಮಾಡುವಂತೆ ಅರ್ಜಿ ಸಲ್ಲಿಸಿದ್ದೆ ಎಂದರೆ ಹೌದು. ಸದರಿ ದಾವೆಯಲ್ಲಿನ ವಾದಿ ಮತ್ತು ಪ್ರತಿವಾದಿಗಳು ವಿಚಾರಣೆ ನೀಡಿರಲಿಲ್ಲ ಎಂದರೆ ಸರಿಯಲ್ಲ. ನಾನು ಹೇಳುವಂತೆ ದಾನ ಪತ್ರ ಮಾಡುವ ಕಾಲಕ್ಕೆ ದೊಡ್ಡನಂಜಮ್ಮ ಉರುಫ್ ನಂಜಮ್ಮ ರವರ ಹೆಸರಿನಲ್ಲಿ ಯಾವುದೇ ಕಂದಾಯದ ದಾಖಲೆಗಳು ಇರಲಿಲ್ಲ ಎಂದರೆ ಸುಳ್ಳು. ಸದರಿ ದಾನ ಪತ್ರವನ್ನು ತಿದ್ದು ಪಡಿ ಮಾಡಿ, ಮೇಲೂ ಬರವಣಿಗೆ ಮಾಡಿರುತ್ತಾರೆಂದು ನನ್ನ ಪರವಾಗಿ ನನ್ನ ತಂದೆ 1978 ರಲ್ಲಿ ದಾವೆ ಸಲ್ಲಿಸಿದ್ದರು ಎಂದರೆ ಸುಳ್ಳು. ಅವರು ಯಾವುದೇ ದಾವೆ ಸಲ್ಲಿಸಿರಲಿಲ್ಲ. ಸದರಿ ದಾವೆ ವಜಾ ಆದ ನಂತರ ನಾವು ಆರ್.ಎ.37/1981 ರಂತೆ ನಿಪಿ.26 ರ ಅಪೀಲು ಸಲ್ಲಿಸಿದ್ದೇವು ಎಂದರೆ ಸುಳ್ಳು. ಆ ರೀತಿಯ ಯಾವುದೇ ಅಪೀಲನ್ನು ನಾವು ಸಲ್ಲಿಸಿರುವುದಿಲ್ಲ. ಸದರಿ ದಾವೆಯ ಮತ್ತು ಅಪೀಲಿನ ದಾಖಲೆಗಳನ್ನು ಹಾಜರು ಮಾಡಿರುವುದಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ.

3. ನನಗೆ ದಾನ ಪತ್ರ ಆಗಿರುತ್ತದೆ ಸ್ವಾಧೀನದಲ್ಲಿ ಇರುತ್ತೇನೆ ಎಂದು ಕಂದಾಯ ಅಥವಾ ಇತರೆ ಅಧಿಕಾರಿಗಳ ಮುಂದೆ ಅರ್ಜಿ ಸಲ್ಲಿಸಿರುತ್ತೀರಾ ಎಂದರೆ ಹೌದು. ಆ ರೀತಿಯ

ಅರ್ಜಿಯನ್ನು ತಹಸಿಲ್ದಾರ್ ರವರ ಮುಂದೆ ನೀಡಿರುತ್ತೇನೆ. ಸದರಿ ಅರ್ಜಿಯ ನಕಲನ್ನು ಹಾಜರು ಮಾಡಿದ್ದೇನೆ. ಅಸಲು ದಾವೆ ವಿಚಾರಣೆಗೆ ಇರುವುದರಿಂದ ಖಾತೆ ಬದಲಾವಣೆ ಮಾಡಲು ಆಗುವುದಿಲ್ಲ ಎಂದು ಹಿಂಬರಹ ನೀಡಿದ್ದು, ಅದನ್ನು ಹಾಜರು ಮಾಡಿದ್ದೇನೆ. ಸದರಿ ಅರ್ಜಿ ನೀಡಿದ ದಿನಾಂಕ ನೆನಪಿಲ್ಲ. ಅಸಲು ದಾವಾ ನಂ.110/1997 ರ ದಾವೆ 2008 ರಲ್ಲಿ ತೀರ್ಮಾನ ಆದ ನಂತರ ಸದರಿ ಅರ್ಜಿ ನೀಡಿದ್ದೇನೆ. ಈ ದಾವೆ ವಿಚಾರಣೆಗೆ ಬಾಕಿ ಇರುತ್ತದೆ ಎಂದು ನನ್ನ ಅರ್ಜಿಯ ಮೇರೆಗೆ ಹಿಂಬರಹ ನೀಡಿರುತ್ತಾರೆ. ಈ ದಾವೆಯನ್ನು 2009 ರಲ್ಲಿ ಸಲ್ಲಿಸಿರುವುದು ಎಂದರೆ ಹೌದು. ತಹಸಿಲ್ದಾರ್ ರವರು ಯಾವುದೇ ಹಿಂಬರಹವನ್ನು ನೀಡಿರುವುದಿಲ್ಲ ಮತ್ತು ನಾನು ಯಾವುದೇ ಅರ್ಜಿಯನ್ನು ಸಲ್ಲಿಸದೆ ಇದ್ದರೂ ಹಿಂಬರಹ ನೀಡಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮಗೂ ದಾವಾ ಆಸ್ತಿಗೂ ಮತ್ತು ಸಂಬಂಧ ಇರುವುದಿಲ್ಲ ಎಂದು ಹಾಗೂ ಬೇರೆ ಗ್ರಾಮದವರು ಎಂದು ವಾದಿಗಳು ಎಲ್ಲಾ ಕಡೆ ಅರ್ಜಿ ಮತ್ತು ತಕರಾರನ್ನು ಸಲ್ಲಿಸಿಕೊಂಡು ಬಂದಿರುತ್ತಾರೆ ಎಂದರೆ ಸುಳ್ಳು. ನಾನು ಸೃಷ್ಟಿಸಿರುವ ದಾನ ಪತ್ರದ ಮೇರೆಗೆ ನಾನು ಎಲ್ಲಾ ಕಡೆ ಹಕ್ಕು ಕೇಳುತ್ತಿದ್ದೇನೆ ಎಂದರೆ ಸುಳ್ಳು. ಈಗಲೂ ಸಹ ದಾವಾ ಆಸ್ತಿಯಲ್ಲಿ ವಾದಿಯರೇ ಕಂದಾಯ ಪಾವತಿ ಮಾಡಿಕೊಂಡ, ತಮ್ಮ ಹೆಸರಿನಲ್ಲಿ ಕಂದಾಯದ ದಾಖಲೆಗಳನ್ನು ಹೊಂದಿ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸುಳ್ಳು, ನಾನೇ ಸ್ವಾಧೀನದಲ್ಲಿ ಇದ್ದೇನೆ.

4. 1928 ರ ವಿಭಾಗದಂತೆ ಯಾವ ಕುಟುಂಬದ ಹೆಸರಿಗೆ ಯಾವುದೇ ಕಂದಾಯದ ದಾಖಲೆಗಳು ಬದಲಾವಣೆ ಆಗಿಲ್ಲ ಎಂದರೆ ಸುಳ್ಳು. ಸದರಿ ವಿಭಾಗದ ಷೆಡ್ಯೂಲ್ ದಾರರರಿಗೆ

ಯಾವಾಗ ಖಾತೆ ಆಗಿರುತ್ತದೆ ಎಂದು ದಿನಾಂಕ ಗೊತ್ತಿಲ್ಲ. ಸದರಿ ವಿಭಾಗದಂತೆ ಬೇರಪ್ಪ ರವರ ಹೆಸರಿಗೆ ಖಾತೆ ಬದಲಾವಣೆ ಆಗಿರುತ್ತದೆ ಎಂದರೆ ಗೊತ್ತಿಲ್ಲ. ಬೇರಪ್ಪ ನವರಿಗೆ ಯಾವುದೇ ಖಾತೆ ಬದಲಾವಣೆ ಆಗದ ಕಾರಣ ದೊಡ್ಡನಂಜಮ್ಮ ರವರಿಗೆ ಸದರಿ ಆಸ್ತಿಯಲ್ಲಿ ಯಾವುದೇ ಹಕ್ಕು ಇಲ್ಲ ಎಂದರೆ ಸುಳ್ಳು. ವಿಭಾಗದಂತೆ ಯಾರ ಹೆಸರಿಗೂ ಖಾತೆ ಬದಲಾವಣೆ ಆಗದ ಕಾರಣ ದೊಡ್ಡನಂಜಮ್ಮ ರವರಿಗೆ ದಾನ ಪತ್ರ ಬರೆದುಕೊಡಲು ಯಾವುದೇ ಹಕ್ಕು ಇರಲಿಲ್ಲ ಎಂದರೆ ಸುಳ್ಳು. ದೊಡ್ಡನಂಜಮ್ಮ ಜೀವಂತ ಇದ್ದ ಕಾಲದಲ್ಲಿ ತನ್ನ ಹೆಸರಿಗೆ ಖಾತೆ ಬದಲಾವಣೆ ಮಾಡಿಕೊಡುವಂತೆ ಯಾವುದೇ ಅರ್ಜಿ ನೀಡಿರಲಿಲ್ಲ ಎಂದರೆ ಸುಳ್ಳು. ಆ ರೀತಿ ಅರ್ಜಿ ಯಾವಾಗ ಕೊಟ್ಟಿರುತ್ತಾರೆ ಎಂದು ಗೊತ್ತಿಲ್ಲ. ಸುಮಾರು 50-60 ವರ್ಷಗಳಿಂದ ದಾವಾ ಆಸ್ತಿ ಮುನಿಯಕ್ಕಯ್ಯಮ್ಮ ರವರ ಹೆಸರಿನಲ್ಲಿ ಇದೆ ಎಂದರೆ ಹೌದು.

ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು, ಮುಂದೂಡಲಾಯಿತು.

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು.)**

ಓ.ಹೇ.ಕೇ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಹೊಸಕೋಟೆ.